# ಮಾಹಿತಿ ಹಕ್ಕು

# ಅಧಿನಿಯಮ 2005

# ರಡಿ 4(1)(ಬಿ)

# ಬೀದರ್ ಜಿಲ್ಲೆ

# ಮಾಹಿತಿ ಹಕ್ಕು ಅಧಿನಿಯಮ 2005
## ಕೈಮಗ್ಗ ಮತ್ತು ಜವಳಿ ಇಲಾಖೆ

### ಮಾಹಿತಿ ಹಕ್ಕು ಕಾಯಿದೆ 2005ರ ಕಲಂ 4(1)ಬಿ ರನ್ವಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಛೇರಿಯ ಕೈಪಿಡಿಯನ್ನು ಸಿದ್ಧಪಡಿಸುವ ಬಗ್ಗೆ.

ಮಾಹಿತಿ ಹಕ್ಕು ಕಾಯಿದೆ 2005ರ ಕಲಂ 4(1)ಬಿ ರನ್ವಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಛೇರಿಯ ಕೈಪಿಡಿಯನ್ನು ಸಿದ್ಧಪಡಿಸಿ ಇಲಾಖೆಯ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸಿ ಸಾರ್ವಜನಿಕ ಕೋರುವ ಮಾಹಿತಿಯನ್ನು ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಮಾಹಿತಿಯು ಈ ಕೆಳಕಂಡಂತಿದೆ.

### [ಭಾಗ 4(1)(ಬಿ)(I)]
### ಸಾರ್ವಜನಿಕ ಸಂಸ್ಥೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು
### ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯು ದಿ:01.04.1992 ರಿಂದ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಕರ್ನಾಟಕ ಸರ್ಕಾರ ಇದರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಾಜ್ಯ ಮಟ್ಟದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಬೆಂಗಳೂರು ಇವರು ಇಲಾಖಾ ಮುಖ್ಯಸ್ಥರು ಆಗಿರುತ್ತಾರೆ. ರಾಜ್ಯದ 4 ವಲಯ ಮಟ್ಟದಲ್ಲಿ ಜಂಟಿ ನಿರ್ದೇಶಕರ ಕಛೇರಿ ಇದ್ದು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕಛೇರಿಯನ್ನು ಹೊಂದಿರುತ್ತದೆ. ಅದರಂತೆ ಬೀದರ್ ಜಿಲ್ಲೆಯಲ್ಲಿಸಹಾಯಕ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ರೇಷ್ಮೆ ಇಲಾಖೆ ಕಟ್ಟಡ, ಕೋಳಾರ(ಕೆ), ಬೀದರ್ ನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕೇಂದ್ರ ರಾಜ್ಯ ಮತ್ತು ಜಿಲ್ಲಾ ವಲಯ ಯೋಜನೆಗಳನ್ನು ಕ್ರಮಬದ್ಧವಾಗಿ ಜವಳಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವ ಕಾರ್ಯದೊಂದಿಗೆ ನೇಕಾರರನ್ನು ಸರ್ವತೋಮುಖ ಅಭಿವೃದ್ಧಿಗೊಳಿಸುವುದು. ಜವಳಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಿ ರಾಜ್ಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು. ಕೈಮಗ್ಗ ಮತ್ತು ಜವಳಿ ಇಲಾಖೆಯ ಕರ್ತವ್ಯವಾಗಿರುತ್ತದೆ.

### [ಭಾಗ 4(1) (ಬಿ)(ii)]
### ಸಾರ್ವಜನಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು.

| | |
|---|---|
| ಅಧಿಕಾರಿ | |
| ಸಹಾಯಕ ನಿರ್ದೇಶಕರು | ಕೈಮಗ್ಗ ಮತ್ತು ಜವಳಿ ಇಲಾಖೆ ಬೀದರ್‌ಈ ಕಛೇರಿಯ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಯಾಗಿರುತ್ತಾರೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದು, ಸರ್ಕಾರದ ವಿವಿಧ ಯೋಜನೆಗಳ ಹಾಗೂ ಎಲ್ಲಾ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ. ಹಾಗೂ ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸುವುದು. ರಾಜ್ಯ ಮಟ್ಟದ ಇಲಾಖೆಯ ಅಧಿಕಾರಿಗಳು ಸೂಚಿವಂತಹ ಕಾರ್ಯಗಳ ನಿರ್ವಹಣೆ |
| ಸಿಬ್ಬಂದಿ | |
| ಜವಳಿ ಪ್ರವರ್ಧನಾಧಿಕಾರಿ | ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಭಾಗದ ವಿಷಯ ನಿರ್ವಾಹಕರಂತೆ ಕಾರ್ಯ ನಿರ್ವಹಿಸುವುದು. ವಿವಿಧ ಕಾರ್ಯಕ್ರಮಗಳನ್ನು,ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣವಾಗಿ ತೊಡಗಿಸಿ, ಮಾಹಿತಿಗಳನ್ನು ಸಿದ್ಧಪಡಿಸಿ ಕಡತವನ್ನು ಮೇಲಿನ ಅಧಿಕಾರಿಗಳಿಗೆ ಮಂಡಿಸುವುದು.ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ವಹಿಸುವಂತಹ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ |
| ಜವಳಿ ತನಿಖಾಧಿಕಾರಿ | ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಭಾಗದ ವಿಷಯ ನಿರ್ವಾಹಕರಂತೆ ಕಾರ್ಯ ನಿರ್ವಹಿಸುವುದು. ವಿವಿಧ ಕಾರ್ಯಕ್ರಮಗಳನ್ನು ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣವಾಗಿ ತೊಡಗಿಸಿ, ಮಾಹಿತಿಗಳನ್ನು ಸಿದ್ಧಪಡಿಸಿ ಕಡತವನ್ನು ಮೇಲಿನ ಅಧಿಕಾರಿಗಳಿಗೆ ಮಂಡಿಸುವುದು.ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ವಹಿಸುವಂತಹ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ. |

| | |
|---|---|
| ದ್ವಿತೀಯ ದರ್ಜೆ ಸಹಾಯಕರು | ಸಹಾಯಕ ನಿರ್ದೇಶಕರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು. ಕಛೇರಿ ಆಡಳಿತ ವ್ಯವಹಾರದ ಬಗ್ಗೆ ಕಛೇರಿ ಮೇಲಾಧಿಕಾರಿಗಳಿಂದ ಸಲಹೆ ನೆರವನ್ನು ಪಡೆಯುವುದು. ಕಛೇರಿಯ ಆಡಳಿತಾತ್ಮಕ ವಿಷಯಗಳಿಗೆ ವಿಷಯ ನಿರ್ವಾಹಕರಂತೆ ಕಾರ್ಯ ನಿರ್ವಹಿಸುವುದು. ಕಛೇರಿಯ ಕೈಪಿಡಿ ಹಾಗೂ ಕಾರ್ಯವಿಧಾನದ ನಿಯಮಗಳಂತೆ,ಕರ್ನಾಟಕ ಆರ್ಥಿಕ ಸಂಹಿತೆಯಂತೆ ಕಛೇರಿಯ ಲೆಕ್ಕವ್ಯವಹಾರ, ಮತ್ತು ಇತರೆ ವಹಿಸಿದ ವಿಷಯಗಳ ಕಾರ್ಯವನ್ನು ನಿರ್ವಹಿಸುವುದು. ಕಛೇರಿ ಆಡಳಿತ ವ್ಯವಹಾರದ ಬಗ್ಗೆ ಕಛೇರಿ ಮೇಲಾಧಿಕಾರಿಗಳಿಂದ ಸಲಹೆ ನೆರವನ್ನು ಪಡೆಯುವುದು. ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ವಹಿಸುವಂತಹ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ |
| ಗ್ರೂಪ್ 'ಡಿ' ನೌಕರರು | ಸಹಾಯಕ ನಿರ್ದೇಶಕರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು. ಕಛೇರಿ ಸ್ವಚ್ಛತಾ ಕೆಲಸ ಮಾಡುವುದು. ಹಾಗೂ ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ವಹಿಸುವಂತಹ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ. |

**[ಭಾಗ 4(1) (ಬಿ)(iii)]**

**ಸಾರ್ವಜನಿಕ ಸಂಸ್ಥೆಗಳಲ್ಲಿ ಲಭ್ಯವಿರುವ ಅಧಿಕಾರದ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ನಿರ್ಧಾರದಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ.**

| ಅಧಿಕಾರಿ | |
|---|---|
| ಸಹಾಯಕ ನಿರ್ದೇಶಕರು | ಸರ್ಕಾರದಿಂದ ಹೊರಡಿಸುವ ಆದೇಶ ಮತ್ತು ಸುತ್ತೋಲೆಗಳಂತೆ,ಯೋಜನೆಗಳ ಅನುಷ್ಠಾನದಲ್ಲಿ ವಿಧಿಸಲಾದ ನಿಯಮಗಳ ಮೇರೆಗೆ, ಮಾರ್ಗಸೂಚಿಯಂತೆ ವಿಷಯ ನಿರ್ವಾಹಕರು ಮಂಡಿಸಿದ ಕಡತಗಳ ಟಿಪ್ಪಣಿ ಮೇಲೆ ನಿರ್ಧಾರಗಳನ್ನು ಕೈಗೊಳ್ಳುವುದು. ಹಾಗೂ ಕಡತಗಳನ್ನು ಪರಿಶೀಲಿಸಿ, ಮೇಲಾಧಿಕಾರಿಗಳಿಗೆ ಕಳುಹಿಸುವುದು./ಪ್ರಸ್ತಾವನೆಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು |
| ಸಿಬ್ಬಂದಿ | |
| ಜವಳಿ ಪ್ರವರ್ಧನಾಧಿಕಾರಿ | ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮಾರ್ಗಸೂಚಿಯಂತೆ ಯೋಜನೆಗಳ ನಿಯಮಾನುಸಾರ ಪರಿಶೀಲಿಸಿ, ಕಡತಗಳನ್ನು ಮೇಲಾಧಿಕಾರಿಗಳಿಗೆ ಮಂಡಿಸುವುದು. ಹೊಸ ವಿಷಯವಾಗಿದಲ್ಲಿ ಕಡತವನ್ನು ತೆರೆದು ಕ್ರಮ ಜರುಗಿಸುವುದು ಅಥವಾ ಇರುವ ಕಡತದಲ್ಲಿ ಕ್ರಮ ಜರುಗಿಸುವುದು. |
| ಜವಳಿ ತನಿಖಾಧಿಕಾರಿ | ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮಾರ್ಗಸೂಚಿಯಂತೆ ಯೋಜನೆಗಳ ನಿಯಮಾನುಸಾರ ಪರಿಶೀಲಿಸಿ, ಕಡತಗಳನ್ನು ಮೇಲಾಧಿಕಾರಿಗಳಿಗೆ ಮಂಡಿಸುವುದು. ಹೊಸ ವಿಷಯವಾಗಿದಲ್ಲಿ ಕಡತವನ್ನು ತೆರೆದು ಕ್ರಮ ಜರುಗಿಸುವುದು ಅಥವಾ ಇರುವ ಕಡತದಲ್ಲಿ ಕ್ರಮ ಜರುಗಿಸುವುದು. |
| ದ್ವಿತೀಯ ದರ್ಜೆ ಸಹಾಯಕರು | ಕಛೇರಿಯ ಕಾರ್ಯವಿಧಾನದ ನಿಯಮಗಳಂತೆ ಸ್ವೀಕರಿಸಿದ ಪತ್ರಗಳಿಗೆ ಕ್ರಮತೆಗೆದುಕೊಳ್ಳುವುದು. |
| ಗ್ರೂಪ್ 'ಡಿ' ನೌಕರರು | ಕಛೇರಿಯ ಕೆಲಸಗಳನ್ನು ನಿರ್ವಹಿಸುವುದು. |

**[ಭಾಗ 4(1) (ಬಿ)(iv)]**

**ಕಾರ್ಯನಿರ್ವಹಣೆಗಾಗಿರೂಪಿಸಲಾದ ಸೂತ್ರಗಳು**

| | |
|---|---|
| ದ್ವಿತೀಯ ದರ್ಜೆ ಸಹಾಯಕರು | ಕಛೇರಿಯ ಕಾರ್ಯವಿಧಾನದ ನಿಯಮಗಳಂತೆ ಸ್ವೀಕರಿಸಿದ ಪತ್ರಗಳಿಗೆ 5 ದಿನಗಳಲ್ಲಿ ಕ್ರಮತೆಗೆದುಕೊಳ್ಳುವುದು. |
| ಜವಳಿ ತನಿಖಾಧಿಕಾರಿ,<br>ಜವಳಿ ಪ್ರವರ್ಧನಾಧಿಕಾರಿ<br>ಸಹಾಯಕ ನಿರ್ದೇಶಕರು | ಆದ್ಯತೆ ಮತ್ತು ತ್ವರಿತವಾಗಿ ಕೆಲಸ ನಿರ್ವಹಿಸುವುದು |

[ಭಾಗ 4(1) (ಬಿ)(v)]

**ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು**

| | |
|---|---|
| 1. ಕೈಮಗ್ಗ ಮತ್ತು ಜವಳಿ ಇಲಾಖೆ | ಅ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957.<br>ಆ) ಕರ್ನಾಟಕ ಆರ್ಥಿಕ ಸಂಹಿತೆ 1957.<br>ಇ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957(ಸಿ.ಸಿ.ಎ).<br>ಈ) ಕೈಮಗ್ಗ ಮತ್ತು ಜವಳಿ ಕಂಪೆಂಡಿಯಂ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಮಾರ್ಗಸೂಚಿ, ಸುತ್ತೋಲೆಗಳು ಹಾಗೂ ನಿರ್ದೇಶನಗಳಂತೆ. ಮತ್ತು ಸರ್ಕಾರದ ಯೋಜನಾ ನೀತಿಗಳಂತೆ<br>ಉ) ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959.<br>ಊ) ದಿ ಮಲ್ಟಿ ಸ್ಟೇಟ್ ಕೋ.ಆಪ್. ಸೊಸೈಟೀಸ್ ಆಕ್ಟ್ 1984.<br>ಋ) ದಿ ಮಲ್ಟಿ ಸ್ಟೇಟ್ ಕೋ.ಆಪ್. ಸೊಸೈಟೀಸ್ ರೂಲ್ಸ್ 1985. |
| 2. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ. | 1956ರ ಕಂಪನಿ ಕಾಯಿದೆಯಂತೆ. |
| 3. ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ | 1956ರ ಕಂಪನಿ ಕಾಯಿದೆಯಂತೆ. |
| 4. ಕರ್ನಾಟಕ ರಾಜ್ಯ ಸಹಕಾರ ಉಣ್ಣೆಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತಿ. | 1959ರ ಕರ್ನಾಟಕ ರಾಜ್ಯ ಸಹಕಾರಿ ಕಾಯಿದೆ ಮತ್ತು ನಿಯಮ 1960. |
| 5. ಕರ್ನಾಟಕ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಲಿ ನಿಯಮಿತ(ಕಾವೇರಿಹ್ಯಾಂಡ್ ಲೂಮ್ಸ್). | ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯಂತೆ. |

[ಭಾಗ 4(1) (ಬಿ) (vi)]

**ಸಾರ್ವಜನಿಕ ಪ್ರಾಧಿಕಾರದ ಅಧೀನದಲ್ಲಿರುವ ವಿಷಯವಾರು/ವಿಭಾಗವಾರು ದಸ್ತಾವೇಜುಗಳ ವಿವರವಾದ ಪಟ್ಟಿ**

ಕಡತಗಳ ವಿವರಗಳನ್ನು 4(1) ಎ ನಲ್ಲಿ ಒದಗಿಸಿದೆ. ಹಾಗೂ ಕಡತಗಳ ವಿವರಗಳನ್ನು www.textiles.kar.nic.inವೆಬ್‌ಸೈಟನಲ್ಲಿ ನೋಡಬಹುದು

[ಭಾಗ 4(1)(ಬಿ)(vii)]

**ಸಾರ್ವಜನಿಕ ಪ್ರಾಧಿಕಾರವು ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಭಂದಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು**

ಕಾರ್ಯಕ್ರಮಗಳು ಅಥವಾ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಧಂದಿಸಿದಂತೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.ಇವರು ನಿರ್ಣಾಯಕ ಪ್ರಾಧಿಕಾರವಾಗಿದ್ದು ಈಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿರುವುದಿಲ್ಲ.

[ಭಾಗ 4(1)(ಬಿ)(viii)]

**ಸಾರ್ವಜನಿಕ ಪ್ರಾಧಿಕಾರವು ಒಳಗೊಂಡಿರುವ ಮಂಡಳಿಗಳು,ಪರಿಷತ್‌ಗಳು, ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡುವಳಿಗಳನ್ನು ಸಾರ್ವಜನಿಕರು ಪಡೆಯುವುದಕ್ಕೆ ಅವಕಾಶ ಇದೆಯೇ ಎಂಬುದರ ವಿವರವಾದ ಪಟ್ಟಿಕೆ**

ಸಮಿತಿಗಳು:

1. ವಸತಿ ಕಾರ್ಯಾಗಾರ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಸಮಿತಿ.
2. ನೂತನ ಜವಳಿ ನೀತಿ ಯೋಜನೆಯಡಿ ಎಸ್.ಎಂ.ಟಿ. ತರಬೇತಿ ಫಲಾನುಭವಿಗಳ ಆಯ್ಕೆಸಮಿತಿ.
3. ನೂತನ ಜವಳಿ ನೀತಿ ಯೋಜನೆಯಡಿ ಕೌಶಲ್ಯಾಭಿವೃದ್ಧಿ ಕೇಂದ್ರ ಅನುಷ್ಠಾನಗೊಳಿಸಲು ಸಮಿತಿ.

[ಭಾಗ 4(1)(ಬಿ) (ix)]

## ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ (Directory)

| ಕ್ರ ಸಂ | ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ. | ಕಛೇರಿಯ ದೂರವಾಣಿ ಸಂಖ್ಯೆ ಮತ್ತು ಈ-ಮೇಲ್ ವಿಳಾಸ | ಮೊಬೈಲ್ ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಕೆ.ಎಮ್ ಛಾವಿಟ್ಟಿ, ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್ | 08482-233129 asstdirectorhtbidar@yahoo.in | 9242323060 |
| 2 | ಶ್ರೀ ಮಂಜುನಾಥ ಆರ್. ಜವಳಿ ಪ್ರವರ್ತನಾಧಿಕಾರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್ | 08482-233129 asstdirectorhtbidar@yahoo.in | 8105857960 |
| 3 | ಜವಳಿ ತನಿಖಾಧಿಕಾರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್, ಹುದ್ದೆ ಖಾಲಿ ಇದೆ | --- | --- |
| 4 | ದ್ವಿತೀಯ ದರ್ಜೆ ಸಹಾಯಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್ ಹುದ್ದೆ ಖಾಲಿ ಇದೆ | --- | --- |
| 5 | ಕವಿರಾಜ್, ಗ್ರೂಪ್ 'ಡಿ' ನೌಕರರು ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್ , ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗಿದೆ. | 08482-233129 asstdirectorhtbidar@yahoo.in | - |

[ಭಾಗ 4(1) (ಬಿ)(x)]

## ಸಾರ್ವಜನಿಕ ಪ್ರಾಧಿಕಾರದ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವ ಧನ/ ವೇತನ

| ಕ್ರಸಂ | ಹುದ್ದೆಯ ಹೆಸರು | ಮೂಲ ವೇತನ | ತುಟ್ಟಿಭತ್ಯೆ | ಮನೆ ಬಾಡಿಗೆ ಭತ್ಯೆ | ಇತರೆ | ಒಟ್ಟು |
|---|---|---|---|---|---|---|
| 1 | ಶ್ರೀ ಕೆ.ಎಮ್ ಛಾವಿಟ್ಟಿ, ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೀದರ್ | 32200=00 | 16833=00 | 3720=00 | 900=00 | 58653=00 |
| 2 | ಜವಳಿ ಪ್ರವರ್ತನಾಧಿಕಾರಿ | 22800 | 10317 | 2280 | — | 35397 |
| 3 | ಜವಳಿ ತನಿಖಾಧಿಕಾರಿ | ಹುದ್ದೆಯು ಖಾಲಿ ಇರುತ್ತದೆ | | | | |
| 4 | ದ್ವಿತೀಯ ದರ್ಜೆ ಸಹಾಯಕರು | ಹುದ್ದೆಯು ಖಾಲಿ ಇರುತ್ತದೆ | | | | |
| 5 | ಗ್ರೂಪ್ 'ಡಿ' ನೌಕರರು | ಹೊರಮೂಲ ಸಂಸ್ಥೆಯಿಂದ ಪಡೆಯಲಾಗಿದೆ | | | | |

[ಭಾಗ 4(1)(ಬಿ)(xi)]

## ಎಲ್ಲಾ ಯೋಜನೆಗಳ ವಿವರಗಳನ್ನು, ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು, ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯ ವ್ಯಯ

ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಬರುವ ಯೋಜನೆಗಳ ವಿವರವಾದ ಮಾಹಿತಿ.

ರಾಜ್ಯ ವಲಯ ಯೋಜನೆಗಳು :-

1) ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ ಯೋಜನೆ :-

ಅ) ರಾಜ್ಯ ಮಟ್ಟದ ಪ್ರದರ್ಶನಗಳು :-

ಮುಖ್ಯ ಕಛೇರಿಯಿಂದ ಆಯೋಜಿಸಲಾಗುವ ರಾಜ್ಯ ಮಟ್ಟದ ವಸ್ತು ಪ್ರದರ್ಶನಗಳಲ್ಲಿ ನೇಕಾರ ಸಹಕಾರ ಸಂಘಗಳು ಉತ್ಪಾದಿಸುವ ವಸ್ತುಗಳನ್ನು ಪ್ರದರ್ಶಿಸಿ ಮಾರಾಟ ಮಾಡಲು ಅವಕಾಶ ನೀಡಲಾಗುವುದು.

2) ಕೈಮಗ್ಗ ಉತ್ಪನ್ನಗಳ ಮಾರಾಟ ಸಹಾಯಧನ:-

ಕೈಮಗ್ಗ ನೇಕಾರ ಸಹಕಾರ ಸಂಘಗಳು ವಾರ್ಷಿಕ ನಿಗದಿಪಡಿಸಿದ 180 ದಿನಗಳಲ್ಲಿ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೇಲೆ ಶೇ: 20% ರಿಯಾಯಿತಿ ವೆಚ್ಚವನ್ನು ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು.

3) ಮಿತವ್ಯಯ ನಿಧಿ ಯೋಜನೆ :-
ನೇಕಾರ ಸಹಕಾರ ಸಂಘಗಳ ನೇಕಾರರು ತಮ್ಮ ಮಜೂರಿಯ ಶೇ 8 ರಷ್ಟು ಖಜಾನೆಯಲ್ಲಿ ಅವರ ಖಾತೆಗೆ ಜಮಾ ಮಾಡಲಾಗುವುದು. ಅದೇ ಮೊತ್ತಕ್ಕೆ ಸರ್ಕಾರದ ವಂತಿಕೆಯನ್ನು ಖಜಾನೆಯಲ್ಲಿ ಜಮಾ ಮಾಡಿ ವಾರ್ಷಿಕ ಶೇ.12 ರಷ್ಟು ಬಡ್ಡಿ ನೀಡಲಾಗುವುದು. 15 ವರ್ಷಗಳ ನಂತರ ಅಥವಾ ನೇಕಾರರಿಗೆ 60 ವರ್ಷಗಳು ತುಂಬಿದ ನಂತರ ಪೂರ್ತಿ ಹಣವನ್ನು ಪಡೆಯಬಹುದಾಗಿದೆ.

4) ವಸತಿ ಕಾರ್ಯಾಗಾರ ಯೋಜನೆ :- ಸಹಕಾರ ಸಂಘದಲ್ಲಿ ಸದಸ್ಯ ನೇಕಾರರು ಹಾಗೂ ಅಸಂಘಟಿತ ವಲಯದ ನೇಕಾರರಿಗೆ ಸ್ವಂತ ಮಾಲೀಕತ್ವ ಉಳ್ಳವರಿಗೆ ನೇಯ್ಗೆ ಚಟುವಟಿಕೆಯೊಂದಿಗೆ ವಸತಿ ಯುಕ್ತ ಮನೆ ನಿರ್ಮಿಸಲು ರೂ.25,000=00 ಸಾಲ ಮತ್ತು ರೂ.2,00,000=00 ಸಹಾಯಧನ ನೀಡಲಾಗುವುದು.

5) ನೂತನ ಜವಳಿ ನೀತಿ ಯೋಜನೆ :-

1) ಈ ಯೋಜನೆಯಡಿ ಸಿವಿಂಗ್ ಮಷೀನ್ ಆಪರೇಟರ್, ಕಸೂತಿ, ಕೈಮಗ್ಗ ನೇಯ್ಗೆ, ವಿದ್ಯುತ್ ಮಗ್ಗ ನೇಯ್ಗೆ, ಗಾರ್ಮೆಂಟ್ಸ್ ಕನ್ಸ್ಟ್ರಕ್ಷನ್ ಕೋರ್ಸ್ ತರಬೇತಿಗಳನ್ನು ಅನುಮೋದನೆ ಪಡೆದ ತರಬೇತಿ ಕೇಂದ್ರಗಳಲ್ಲಿ ನೀಡಲಾಗುತ್ತದೆ. ತರಬೇತಿಯಲ್ಲಿ ಫಲಾನುಭವಿಗಳಿಗೆ ರೂ.3500 ಶಿಷ್ಯವೇತನವನ್ನು 1 ಮೈಲುಗಲ್ಲಿನಲ್ಲಿ ಹಾಗೂ ತರಬೇತಿ ಸಂಸ್ಥೆಯವರಿಗೆ ತರಬೇತಿ ಮುಗಿದ ನಂತರ 1ನೇ ಮೈಲುಗಲ್ಲಿನಲ್ಲಿ ಹಾಗೂ ತರಬೇತಿ ಪಡೆದ ಫಲಾನುಭವಿಗಳನ್ನು ಜವಳಿ ಘಟಕಗಳಲ್ಲಿ / ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿ ಕೆಲಸಕ್ಕೆ ಸೇರಿದ ನಂತರ 2ನೇ ಮೈಲುಗಲ್ಲಿನ ಹಣ ಬಿಡುಗಡೆ ಮಾಡಲಾಗುವುದು.

2) ಹೊಸದಾಗಿ ಸ್ಥಾಪಿತವಾದ ಜವಳಿ ಆಧಾರಿತ ಕೈಗಾರಿಕೆಗಳಿಗೆ (Industries) ಸಾಲ ಆಧಾರಿತ ಬಂಡವಾಳ ಹೂಡಿಕೆ ಸಹಾಯಧನ ನೀಡಲಾಗುವುದು.

3) ಪ್ರವೇಶ ತೆರಿಗೆ, ಮುದ್ರಾಂಕ ಶುಲ್ಕ, ಭೂಸ್ವಾಧೀನ ಪ್ರಕ್ರಿಯೆ ವೆಚ್ಚ ಮರುಪಾವತಿ ನೀಡಲಾಗುವುದು.

4) ಪ್ರತಿ ಯುನಿಟ್ ಗೆ ರೂ.1.00 ರಂತೆ ವಿದ್ಯುತ್ ಸಹಾಯಧನ ನೀಡಲಾಗುವುದು ಹಾಗೂ ಇತರೆ ಪ್ರೋತ್ಸಾಹನ ಸೌಲಭ್ಯಗಳನ್ನು ನೀಡಲಾಗುವುದು.

ಜಿಲ್ಲಾ ವಲಯದ ಯೋಜನೆಗಳು :-

1) ಕೈಮಗ್ಗ ಉದ್ಯಮಗಳಿಗೆ ಸಹಾಯ:-

1) ಕೈಮಗ್ಗ ನೇಕಾರ ಸಹಕಾರ ಸಂಘಗಳ ಬಲವರ್ಧನೆ ಹಾಗೂ ಪುನಃಶ್ಚೇತನಕ್ಕಾಗಿ ಸದಸ್ಯ ನೇಕಾರರಿಗೆ ಕೈಮಗ್ಗ ನೇಕಾರಿಕೆ ತರಬೇತಿ ನೀಡಲಾಗುವುದು.

2) ತರಬೇತಿ ಪಡೆದ ನೇಕಾರರಿಗೆ ಸುಧಾರಿತ ಕೈಮಗ್ಗಗಳನ್ನು ಪೂರೈಸಲಾಗುವುದು.

3) ಸಹಕಾರ ಸಂಘಗಳಿಗೆ ಹೊಸ ಸದಸ್ಯರಾಗಬಯಸುವವರಿಗೆ ಶೇರು ಸಹಾಯಧನ ನೀಡಲಾಗುವುದು.

4) ಸಂಘಗಳಲ್ಲಿ ಕಾರ್ಯನಿರತ ನೇಕಾರರಿಗೆ ಮನೆ ಕಟ್ಟಿಕೊಳ್ಳಲು ವಸತಿ ಕಾಲೋನಿ ನಿರ್ಮಾಣಕ್ಕಾಗಿ ಸಾಲ ಮತ್ತು ಸಹಾಯಧನ ನೀಡಲಾಗುವುದು.

5) ಸಂಘಗಳಿಗೆ ಸಾಮೂಹಿಕ ನೇಯ್ಗೆ ಕೇಂದ್ರ ನಿರ್ಮಾಣಕ್ಕಾಗಿ ಸಾಲ ಮಂಜೂರು ಮಾಡಲಾಗುವುದು.

6) ಸಂಘಗಳು ಬಣ್ಣದ ಮನೆಗಳನ್ನು ನಿರ್ಮಿಸಲು ಸಾಲವನ್ನು ನೀಡಲಾಗುವುದು.

2) ಕೈಮಗ್ಗ ಸಹಕಾರ ಸೊಸೈಟಿಗಳಲ್ಲಿ ಸರ್ಕಾರದ ಶೇರು ಮೊತ್ತ:-
ಕೈಮಗ್ಗ ನೇಕಾರ ಸಹಕಾರ ಸಂಘಗಳ ಸಾಲ ಎತ್ತುವ ಪರಿಮಿತಿಯನ್ನು ಹೆಚ್ಚಿಸುವ ಸಲುವಾಗಿ ನೇಕಾರ ಸಹಕಾರ ಸಂಘಗಳ ಬೈಲಾದಲ್ಲಿ ಅವಕಾಶದಂತೆ ಮಿತಿಗೊಳಪಟ್ಟು ಸರ್ಕಾರದ ಶೇರು ಬಂಡವಾಳವನ್ನು ಹೂಡಿಕೆ ಮಾಡಲಾಗುವುದು.

3) ಹೊಸ ಸದಸ್ಯರಿಗೆ ಶೇರು ಸಾಲ :-
ಕೈಮಗ್ಗ ಸಹಕಾರ ಸೊಸೈಟಿಗಳಲ್ಲಿ ಸಾಲ ಎತ್ತುವ ಪರಿಮಿತಿಯನ್ನು ಹೆಚ್ಚಿಸಲು ಹೊಸ ಸದಸ್ಯರ ಶೇರು ಸಲ ಒದಗಿಸಲಾಗುವುದು.

ಕೇಂದ್ರ ವಲಯ ಯೋಜನೆಗಳು :-

1) ಕೈಮಗ್ಗ ನೇಕಾರರಿಗೆ ಮಾರುಕಟ್ಟೆ ಪ್ರೋತ್ಸಾಹ ಯೋಜನೆಗಳು

1) ರಾಷ್ಟ್ರೀಯ ಕೈಮಗ್ಗ ಮೇಳ / ವಿಶೇಷ ಕೈಮಗ್ಗ ಮೇಳ :-
ಮೇಲಿನಂತೆ ರಾಜ್ಯ ಮತ್ತು ಅಂತರ ರಾಜ್ಯದ ನೇಕಾರರ ಸಹಕಾರ ಸಂಘಗಳು ಭಾಗವಹಿಸಲು ರಾಷ್ಟ್ರೀಯ ಮತ್ತು ವಿಶೇಷ ಕೈಮಗ್ಗ ಮೇಳಗಳನ್ನು ಏರ್ಪಡಿಸಲಾಗುವುದು.

2) ಮುದ್ರಾ ಯೋಜನೆ :-
ಕೈಮಗ್ಗ ನೇಕಾರರು ನೇಕಾರಿಕೆ ಚಟುವಟಿಕೆಗಳಿಗೆ ಬ್ಯಾಂಕಿನಿಂದ ಸಾಲ ಪಡೆಯಲು ಬ್ಯಾಂಕುಗಳಿಂದ ಕ್ರೆಡಿಟ್ ಕಾರ್ಡ್ ನೀಡುವ ಮೂಲಕ ಸಹಾಯ ಒದಗಿಸಲಾಗಿದೆ.

[ಭಾಗ 4(1)(ಬಿ) (xii)]

**ಹಂಚಿಕೆ ಮಾಡಲಾದ ಮೊಬಲಗುಗಳನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು**

ವರ್ಷ : 2017-18 ರೂ. ಲಕ್ಷಗಳಲ್ಲಿ

| ಕ್ರ.ಸಂ | ಯೋಜನೆ | ಮೊತ್ತ |
|---|---|---|
| 01 | ವಿಶೇಷ ಘಟಕ ಯೋಜನೆ | 86.40 |
| 02 | ಗಿರಿಜನ ಉಪಯೋಜನೆ | 22.68 |
| 03 | ಜಿಲ್ಲಾ ವಲಯ ಯೋಜನೆ | 34.52 |

| ಕ್ರ ಸಂ. | ಫಲಾನುಭವಿಗಳ ವಿವರ | ಮೊತ್ತ | ಜಾರಿಯ ವಿಧಾನ |
|---|---|---|---|
| 1 | ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ಸ್ಟೈಲ್ ಟೆಕ್ನಾಲಜಿ, ಬೀದರ್ | 4.75 | ನೂ.ಜ.ನೀ ಯೋಜನೆಯಡಿ ಎಸ್.ಎಂ.ಟಿ ತರಬೇತಿಗಾಗಿ ನಿಯಮಾನುಸಾರ ಜಾರಿಗೊಳಿಸಿದೆ |
| 2 | ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ಸ್ಟೈಲ್ ಟೆಕ್ನಾಲಜಿ, ಬೀದರ್ | 4.75 | -ಇದೇ- |
| 3 | ಬೀದರ್ ಅಪಾರೆಲ್ & ಟ್ರೈನಿಂಗ್ ಸೆಂಟರ್, ಬೀದರ್ | 4.75 | -ಇದೇ- |
| 4 | ಕಲ್ಯಾಣಿ ಪ್ರೊಫೆಷನಲ್ ಇನ್ಸ್ಟಿಟ್ಯೂಟ್ ಫಾರ್ ವುಮೆನ್ & ರೂರಲ್ ಡೆವಲಪ್‌ಮೆಂಟ್, ಬಸವಕಲ್ಯಾಣ | 4.75 | -ಇದೇ- |
| 5 | ಗುರುರತ್ನ ಎಜುಕೇಷನ್ ಟ್ರಸ್ಟ್, ಬೀದರ್ | 5.50 | -ಇದೇ- |
| 6 | ಗುರುರತ್ನ ಎಜುಕೇಷನ್ ಟ್ರಸ್ಟ್, ಕಮಲನಗರ | 8.25 | -ಇದೇ- |
| 7 | ಸರಸ್ವತಿ ಮಹಿಳಾ ಮಂಡಳ, ಭಾಲ್ಕಿ | 4.75 | -ಇದೇ- |
| 8 | ಭಾರತ್ ಅಪಾರೆಲ್ ಟ್ರೈನಿಂಗ್ ಸೆಂಟರ್, ಬೀದರ್ | 5.50 | -ಇದೇ- |
| 9 | ಸೃಷ್ಟಿ ಆರ್ಗನೈಸೇಷನ್ ಫಾರ್ ವುಮೆನ್ & ಚೈಲ್ಡ್ ಡೆವಲಪ್‌ಮೆಂಟ್, ಶಿವನಗರ, ಬೀದರ್ | 11.00 | -ಇದೇ- |
| 10 | ಶ್ರೀ.ಮಹಾಲಕ್ಷ್ಮಿ ಕನಕದಾಸ ಕಂಬಳಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ನಿ.ಚಿಮಕೋಡ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 11 | ಶ್ರೀಮತಿ ರಮಾಬಾಯಿ ಅಂಬೇಡ್ಕರ್ ಕೈಮಗ್ಗ ನೇಕಾರರ ಸಹಕಾರ ಸಂಘ ನಿ.ಚಿಕ್ಕಪೇಟ್ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 12 | ಕನಕದಾಸ ಕಂಬಳಿ ಮತ್ತು ಉಣ್ಣೆ ಉತ್ಪಾದಕರ ಬುನಗಾರರ ಸಹಕಾರ ಸಂಘ ನಿ.ಮಿರಳ್ಳಿ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 13 | ಶ್ರೀ ಗುರು ಮಹಾತ್ಮಾ ಬೊಮ್ಮಗೊಂಡೇಶ್ವರ ಕಂಬಳಿ [illegible] ಮತ್ತು ಉಣ್ಣೆ ಉತ್ಪಾದಕರ ನೇಕಾರರ ಸಹಕಾರ ಸಂಘ ನಿ.ಘೋಡವಳ್ಳಿ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 18 | ಉಣ್ಣೆ ಉತ್ಪಾದಕರ ಹಾಗೂ ಕಂಬಳಿ ನೇಕಾರರ ಸಹಕಾರ ಸಂಘ ನಿ.ಮಾಣಿಕವಳ್ಳಿ ತಾ.ಜಿ.ಬೀದರ. | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 19 | ವೀರಲಿಂಗೇಶ್ವರ ಉಣ್ಣೆ ಉತ್ಪಾದಕರ ಮತ್ತು ನೇಕಾರರ ಸಹಕಾರ ಸಂಘ ನಿ.ಕೊಹಿನೂರ ತಾ.ಬಸವಕಲ್ಯಾಣ ಜಿ.ಬೀದರ. | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |

| | | | |
|---|---|---|---|
| 20 | ಶ್ರೀ. ಭಕ್ತ ಕನಕದಾಸ ಉಣ್ಣೆ ಮತ್ತು ಕುರಿ ಸಾಕಾಣಿಕೆ ಉತ್ಪಾದಕರ ನೇಕಾರ ಸಹಕಾರ ಸಂಘ ನಿ.ಧೂಪತ ಮಹಾಗಾಂವ್ ತಾ:ಔರಾದ ಜಿ:ಬೀದರ. | 0.90 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 21 | ತಾಲೂಕಾ ಕುರಿ ಸಂಗೋಪನಾಹಾಗೂ ಉಣ್ಣೆ ಉತ್ಪಾದಕರ ನೇಕಾರರ ಸಹಕಾರ ಸಂಘ ನಿ.ತಾಳಮಡಗಿ ತಾ:ಹುಮನಾಬಾದ ಜಿ:ಬೀದರ. | 1.35 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, ಕೈಮಗ್ಗ ನೇಯ್ಗೆ ತರಬೇತಿ |
| 22 | ಶ್ರೀ.ನೀಲಾಂಬಿಕಾ ಕೈಮಗ್ಗ ನೇಕಾರರ ಸಹಕಾರ ಸಂಘ ನಿ.ತಾಳಮಡಗಿ ತಾ:ಹುಮನಾಬಾದ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ. |
| 23 | ಭಕ್ತ ಕನಕದಾಸ ಕುರಿ ಮತ್ತು ಉಣ್ಣೆ ಸಾಕಾಣಿಕೆ ಉತ್ಪಾದಕರ ನೇಕಾರರ ಸಹಕಾರ ಸಂಘ ನಿ. ಕಬೀರಾಬಾದವಾಡಿ ತಾ:ಹುಮನಾಬಾದ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 24 | ಮೈಲಾರಲಿಂಗೇಶ್ವರ ಉಣ್ಣೆ ಉತ್ಪಾದಕರ ಮತ್ತು ಕಂಬಳಿ ನೇಕಾರರ ಸಹಕಾರ ಸಂಘ ನಿ.ಸೀತಾಳಗೇರಾ ತಾ:ಹುಮನಾಬಾದ ಜಿ:ಬೀದರ. | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 25 | ಸಿದ್ಧಲಿಂಗೇಶ್ವರ ಕುರಿ ಮತ್ತು ಉಣ್ಣೆ ಉತ್ಪಾದಕರ ನೇಕಾರರ ಸಹಕಾರ ಸಂಘ ಕಂದಗೂಳ ತಾ:ಹುಮನಾಬಾದಜಿ:ಬೀದರ. | 1.35 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, ಕೈಮಗ್ಗ ನೇಯ್ಗೆ ತರಬೇತಿ |
| 26 | ಶ್ರೀ ಯಲ್ಲಾಲಿಂಗೇಶ್ವರ ಕುರಿ ಮತ್ತು ಉಣ್ಣೆ ಉತ್ಪಾದಕರ ನೇಕಾರರ ಸಹಕಾರ ಸಂಘ ನಿ.ಚಿಟಗುಪ್ಪಾ ತಾ:ಹುಮನಾಬಾದ ಜಿ:ಬೀದರ. | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 27 | ಮನ್ನಾ-ಎ-ಖೇಳ್ಳಿ ಕಂಬಳಿ ನೇಕಾರರ ಸಹಕಾರ ಸಂಘ ನಿ.ಮನ್ನಾ-ಎ-ಖೇಳ್ಳಿ ತಾ:ಹುಮನಾಬಾದ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 28 | ಬೋಮಗೊಂಡೇಶ್ವರ ಕುರಿ ಮತ್ತು ಉಣ್ಣೆ ನೇಕಾರರ ಅಭಿವೃದ್ಧಿ ಸಹಕಾರ ಸಂಘ ನಿ.ಭಾಲ್ಕಿ ತಾ:ಭಾಲ್ಕಿ ಜಿ:ಬೀದರ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |
| 29 | ಉಣ್ಣೆ ಉತ್ಪಾದಕರ ಮತ್ತು ಕಂಬಳಿ ನೇಕಾರರ ಸಹಕಾರ ಸಂಘ ನಿ.ಕಲವಾಡಿ ತಾ:ಭಾಲ್ಕಿ | 0.88 | ಜಿಲ್ಲಾ ವಲಯ ಯೋಜನೆಯಡಿ ದುಡಿಮೆ ಬಂಡವಾಳ ಸಾಲ, ಕೈಮಗ್ಗ ಆಧುನೀಕರಣ, |

[ಭಾಗ 4(1)(ಬಿ) (xiii)]

<u>ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು</u>

| | | |
|---|---|---|
| 1 | ನೂತನ ಜವಳಿ ನೀತಿ ಯೋಜನೆ ತರಬೇತಿ | ಸೀವಿಂಗ್ ಮಷೀನ್ ಆಪರೇಟರ್ ಕೋರ್ಸ್ ತರಬೇತಿ ಪಡೆಯಲು 18 ರಿಂದ 35 ವರ್ಷದೊಳಗಿನ ಯುವಕ ಯುವತಿಯರು ಅಭ್ಯರ್ಥಿಗಳು ಕನಿಷ್ಠ 5ನೇ ತರಗತಿ ತೇರ್ಗಡೆ ಹೊಂದಿರುವವರು |
| 2 | 2 ವಿದ್ಯುತ್ ಮಗ್ಗ ಸಹಾಯಧನ ಯೋಜನೆ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ತರಬೇತಿ ಪಡೆದ, ಸಹಕಾರ ಸಂಘದಲ್ಲಿ ಸದಸ್ಯರಾಗಿರುವ, ಕೈಮಗ್ಗ ನೇಯ್ಗೆ ವೃತ್ತಿಯಿಂದ ವಿದ್ಯುತ್ ಮಗ್ಗ ನೇಯ್ಗೆ ವೃತ್ತಿಗೆ ಬದಲಾವಣೆ ಹೊಂದಬಯಸುವ, ನೇಯ್ಗೆ ವೃತ್ತಿಯನ್ನು ತಿಳಿದಿರುವ ವಿದ್ಯುತ್ ಮಗ್ಗ ರಹಿತರಾಗಿರುವ ನೇಕಾರರು. |
| 3 | ಜಿಲ್ಲಾ ವಲಯ ಯೋಜನೆ | ಕೈಮಗ್ಗ ನೇಕಾರ ಸಹಕಾರ ಸಂಘಗಳು |
| 4 | ನೇಕಾರ ಕಲ್ಯಾಣ ಯೋಜನೆ | ನೇಕಾರರ ಮಕ್ಕಳು |

<u>ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸುವುದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು</u>

ಕೈಮಗ್ಗ ಮತ್ತು ಜವಳಿ ಇಲಾಖೆಯ ಮಾಹಿತಿಯನ್ನು ಕಾಲಕಾಲಕ್ಕೆ ಸಾಧಿಸಿರುವ ಪ್ರಗತಿಯನ್ವಯ ವೆಬ್ ಸೈಟಿನ ಮಾಹಿತಿಯನ್ನು ಕ್ರಮಬದ್ಧಗೊಳಿಸಲಾಗುವುದು.

ಸಹಾಯಕ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ
ಜಿಲ್ಲಾ ಪಂಚಾಯತ ಬೀದರ